# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 100 |
| ಸದಸ್ಯರ ಹೆಸರು | ಶ್ರೀ. ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 13-02-2023 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ "ನಮ್ಮ ಕ್ಲಿನಿಕ್" ಎಷ್ಟು ಕಡೆಗಳಲ್ಲಿ ಪ್ರಾರಂಭವಾಗಿದೆ; | 15ನೇ ಹಣಕಾಸು ಆಯೋಗದ ಅನುದಾನದಲ್ಲಿ 438 ನಮ್ಮ ಕ್ಲಿನಿಕ್ ಗಳನ್ನು ಪ್ರಾರಂಭಿಸಲು ಅನುಮೋದನೆಯಾಗಿರುತ್ತದೆ. ದಿ:14.12.2022ರಂದು ಸನ್ಮಾನ್ಯ ಮುಖ್ಯಮಂತ್ರಿಗಳು, ಇತರೆ ಜಿಲ್ಲೆಗಳಲ್ಲಿ ನಮ್ಮ ಕ್ಲಿನಿಕ್ ಗಳಿಗೆ ಚಾಲನೆ ನೀಡಿರುತ್ತಾರೆ ಹಾಗೂ ದಿ:07.02.2023ರಂದು ಬಿ.ಬಿ.ಎಂ.ಪಿ ವ್ಯಾಪ್ತಿಯ 108 "ನಮ್ಮ ಕ್ಲಿನಿಕ್" ಗಳಿಗೆ ಚಾಲನೆ ನೀಡಿರುತ್ತಾರೆ.<br><br>ಈವರೆಗೆ ಇತರೆ ಜಿಲ್ಲೆಗಳಲ್ಲಿ (ಬಿ.ಬಿ.ಎಂ.ಪಿ ಹೊರತುಪಡಿಸಿ) 163 "ನಮ್ಮ ಕ್ಲಿನಿಕ್"ಗಳು ಹಾಗೂ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ 108 "ನಮ್ಮ ಕ್ಲಿನಿಕ್"ಗಳು ಪ್ರಾರಂಭಿಸಿದ್ದು, ಒಟ್ಟು 271 "ನಮ್ಮ ಕ್ಲಿನಿಕ್"ಗಳನ್ನು ಪ್ರಾರಂಭಿಸಲಾಗಿದೆ. |
| ಆ) | ರಾಜ್ಯ ಸರ್ಕಾರ ಪ್ರಾರಂಭಿಸಿರುವ "ನಮ್ಮ ಕ್ಲಿನಿಕ್"ಗಳ ಒಟ್ಟು ಸಿಬ್ಬಂದಿಗಳ ಸಂಖ್ಯೆ ಎಷ್ಟು; | ಪ್ರತಿ ನಮ್ಮ ಕ್ಲಿನಿಕ್‌ಗೆ 4 ಸಿಬ್ಬಂದಿಗಳಂತೆ<br>1-ವೈದ್ಯಾಧಿಕಾರಿ<br>1-ಶುಶ್ರೂಷಕರು<br>1-ಪ್ರಯೋಗಶಾಲಾ ತಂತ್ರಜ್ಞರು/ಎಲ್.ಡಿ.ಸಿ ಮತ್ತು<br>1-ಗ್ರೂಪ್ 'ಡಿ'<br>ಒಟ್ಟು 271 ನಮ್ಮ ಕ್ಲಿನಿಕ್ ಗಳ ಸಿಬ್ಬಂದಿ ವಿವರಗಳು ಈ ಕೆಳಕಂಡಂತಿದೆ.<br><br>271-ವೈದ್ಯಾಧಿಕಾರಿಗಳು<br>271-ಶುಶ್ರೂಷಕರು<br>271-ಪ್ರಯೋಗಶಾಲಾ ತಂತ್ರಜ್ಞರು/ಎಲ್.ಡಿ.ಸಿ ಮತ್ತು<br>271- ಗ್ರೂಪ್ 'ಡಿ' |
| ಇ) | ಇಲ್ಲಿಯವರೆಗೂ ಚಿಕಿತ್ಸೆ ಪಡೆದಿರುವ ರೋಗಿಗಳ ಸಂಖ್ಯೆ ಎಷ್ಟು; | ದಿ:14.12.2022ರಿಂದ ದಿ:07.02.2023ರವರೆಗೆ 1,43,865 ರೋಗಿಗಳು ಚಿಕಿತ್ಸೆ ಪಡೆದಿರುತ್ತಾರೆ. |
| ಈ) | ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಹಾಗೂ ಹೊಂದದಿರುವ "ನಮ್ಮ ಕ್ಲಿನಿಕ್" ಗಳ ಸಂಖ್ಯೆ ಎಷ್ಟು? | ಪ್ರಾರಂಭವಾಗಿರುವ ಎಲ್ಲಾ 271 ನಮ್ಮ ಕ್ಲಿನಿಕ್ ಗಳು ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ವಿದ್ಯುಚ್ಛಕ್ತಿ ಮತ್ತು ಪ್ರತ್ಯೇಕ ಶೌಚಾಲಯಗಳನ್ನು ಹೊಂದಿರುತ್ತವೆ. |

**ಕಡತ ಸಂಖ್ಯೆ: ಆಕುಕ 01 ಎಸ್‌ಎಂಎಂ 2023**

**(ಡಾ.ಕೆ ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು